ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಬೇಲೂರು.

ಸಿಸಿಃ 714/2016

| | | |
|---|---|---|
| ಹೆಸರು | ಶಿವಸ್ವಾಮಿಗೌಡ | ದಿಃ 26-04-2018 |
| ತಂದೆ ಹೆಸರು | ಸಣ್ಣತಮ್ಮೇಗೌಡ | |
| ವಯಸ್ಸು | 67 ವರ್ಷ | ಪಿಡಬ್ಲ್ಯೂಃ 7 |
| ಉದ್ಯೋಗ | ವ್ಯವಸಾಯ | ಸಿಡಬ್ಲ್ಯೂಃ 7 |
| ವಾಸ | ತಿರುಮನಹಳ್ಳಿ ಗ್ರಾಮ | ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು |

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ರವರಿಂದ

ಈಗ ತೋರಿಸಿದ ದಾಖಲೆಯಲ್ಲಿನ ಸಹಿ ನನ್ನದು. ಸದರಿ ದಾಖಲೆ ಕೃತ್ಯ ಸ್ಥಳ ಮಹಜರ್ ಆಗಿದ್ದು , ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸುಮಾರು 2 ವರೆ ವರ್ಷಗಳ ಹಿಂದೆ ನಮ್ಮ ತೋಟದ ಪಕ್ಕದಲ್ಲಿರುವ ನನ್ನ ಅಣ್ಣ ಚಾಸಾ-1 ರವರ ತೋಟದಲ್ಲಿ ತೆಂಗಿನ ಕಾಯಿ ಕಳ್ಳತನ ಆದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಮಹಜರ್ ನ್ನು ಮಧ್ಯಾಹ್ನ 12-30 – 1.30 ರವರೆಗೆ ಮಾಡಿರುತ್ತಾರೆ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಬಿ ಎಸ್ ಜೆ ವಕೀಲರಿಂದಃ

ಚಾಸಾ-1 ರವರು ನನ್ನ ಅಣ್ಣ ಎಂದರೆ ಸರಿ. ಚಾಸಾ-1 ಮತ್ತು ಇತರರ ವಿರುದ್ದ ಪರಿಶಿಷ್ಟ ದೌರ್ಜನ್ಯ ನಿಷೇಧ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲು ಆಗಿದೆ ಎಂದರೆ ಸರಿ. ಚಾಸಾ-1 ರವರ ತೋಟದ ಸ.ನಂ.59. ವಿಸ್ತೀರ್ಣ 01 ಎಕರೆ ಇದೆ. ಪೊಲೀಸರು ನನಗೆ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಬರವಣಿಗೆ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಜಮೀನಿನ ಪೂರ್ವ ಭಾಗದಲ್ಲಿ ತೆಂಗಿನ ಕಾಯಿ ರಾಶಿ ಹಾಕಿದ್ದರು. ಆ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಸಹಿ ಹಾಕುವಂತೆ ಪೊಲೀಸರು ಹೇಳಿದ ಕಾರಣ ನಾನು ಸಹಿ ಹಾಕಿರುತ್ತೇನೆ. ನನ್ನ ಮನೆಗೂ ಮತ್ತು ಚಾಸಾ-1 ರವರ ಆಸ್ತಿಗೂ ಸುಮಾರು ಕಾಲು ಕಿಮೀ. ಆಗುತ್ತದೆ. ನಾನು ಘಟನೆ ನಡೆದ ಸ್ಥಳದ ಚೆಕ್ಕುಬಂದಿ ಹೇಳಬಲ್ಲೆ. ನಾನು ಕೃತ್ಯ ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸ.ನಂ.59 ಚಾಸ-1 ರವರಿಗೆ ಸಂಬಂಧಪಟ್ಟ ಜಮೀನು ಅಲ್ಲ ಎಂದರೆ ಸರಿಯಲ್ಲ. ನನಗೆ ಖುದ್ದಾಗಿ ಮಾಹಿತಿ ಇಲ್ಲದಿದ್ದರೂ ಸಹ ನನ್ನ ಅಣ್ಣ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಾನು ಹೇಳಿದ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

ಓ ಹೇ ಕೇ ಸ ಇ ಒ

ಜೆಎಂಎಫ್‌ಸಿ-ಬೇಲೂರು

**Case Called.**

**Accused No.1 and 2 are absent.**

**EA filed and allowed.**

**Accused No.3 and 4 are present.**

**CW.7 present and fully examined as PW.7. Ex.P.2(c) marked.**

**Reissue witness summons to CW.2, 6, 10 to 13.**

**Returnable by 08.06.2018.**

**Civil Judge: Belur**